

ತೇಪೆ ಹಾಕಿದ ಜೀನ್ಸ್ ಕೂಡ ಈ ದಿನಮಾನದ ಫ್ಯಾಷನ್. ಅಕಸ್ಮಾತ್ತಾಗಿ ಸುಟ್ಟ ಭಾಗಕ್ಕೆ ಯಾವುದೋ ಹೂವನ್ನೋ, ಇನ್ಯಾವುದೋ ಕುಸುರಿಯನ್ನೋ ಮಾಡಿಸಿಕೊಂಡು ಇನ್ನಷ್ಟು ಕಾಲ ತೊಡುತ್ತಿದ್ದವರು ನಾವು. ಈಗ ಕೊಳ್ಳುವಾಗಲೇ ತೇಪೆ ಹಾಕಿದ ಜೀನ್ಸ್ ಕಡೆಗೆ ನೋಟ ಹೊರಳುತ್ತದೆ. ಅದು ಅಕಸ್ಮಾತ್ತಾಗಿ ಸುಟ್ಟರೂ ಚಿಂತೆಯಿಲ್ಲ. ಇನ್ನೊಂದು ತೇಪೆ ಬಿದ್ದರಾಯಿತು.

ಅಮೆರಿಕದಲ್ಲಿ 1960ರ ದಶಕದಲ್ಲಿ ತೇಪೆ ಸಂಸ್ಕೃತಿಯೊಂದು ಯುದ್ಧ ಕಾಲದ ಸಂಕೇತವಾಗಿ ವ್ಯಕ್ತಗೊಂಡಿತ್ತು. ವಿಯೆಟ್ನಾಂ ಯುದ್ಧದಲ್ಲಿ ಅಮೆರಿಕನ್ನರ ಧೋರಣೆ ಖಂಡಿಸಲು ಯುವಕರು ತೇಪೆ ಹಾಕಿದ ಬಟ್ಟೆಗಳನ್ನು ತೊಟ್ಟರು. ಠಾಕುಠೀಕಾದ ಸೂಟುಬೂಟು, ಇಸ್ತ್ರಿ ಹಾಕಿದ ಹಸನಾದ ಬಟ್ಟೆ ತೊಟ್ಟ ನಾಜೂಕುಗಾರರ ಕಠಿಣ ಮನಸ್ಸುಗಳನ್ನು ಧಿಕ್ಕರಿಸಲು ಆಗ ಹುಟ್ಟಿಕೊಂಡ ಪ್ರತಿಸಂಸ್ಕೃತಿ ಇದು.

ಹಿಪ್ಪಿಗಳು ಕೂಡ ಪಾಶ್ಚಾತ್ಯ ಉಡುಪುಗಳ ಅತಿ ಔಪಚಾರಿಕ ವಿನ್ಯಾಸವನ್ನು ಒಪ್ಪಲಿಲ್ಲ. ತಣ್ಣಗಿನ ಕ್ರೌರ್ಯದ ಭಾಗವಾಗಿ ಕೆಲವು ಹಿಪ್ಪಿಗಳಿಗೆ ಅದು ಕಂಡಿತು. ಅದಕ್ಕೇ ಅವರು ಗುಲಾಬಿ ಹೂಗಳ ಚಿತ್ರದ ತೇಪೆ ಇರುವ ಬಟ್ಟೆಗಳನ್ನು ತೊಟ್ಟರು. ಶಾಂತಿ ಸಂದೇಶ ಸಾರುವ ಸಂಕೇತಗಳ ಚಿತ್ತಾರಗಳನ್ನು ಅಂಗಿಗಳ ಮೇಲೆ, ಪ್ಯಾಂಟ್ ಗಳ ಮೇಲೆ ಬಿಡಿಸಿಕೊಂಡರು. ಆಧುನಿಕ ಪೇಂಟಿಂಗ್ ಗಳಿಗೆ ಬಟ್ಟೆಗಳನ್ನೇ ಭಿತ್ತಿಯಾಗಿಸಿದರು. ಹಾಗೆ ಮೂಡಿಸಿಕೊಂಡ ಕಲೆ ಅವರು ನಡೆದಾಡಿದ ಕಡೆಯಲ್ಲೆಲ್ಲ ಹರಡಿತು. ವಿಯೆಟ್ನಾಂ ಯುದ್ಧದಲ್ಲಿ ಶಾಂತಿ ಸಂದೇಶ ಸಾರಲು ಕೂಡ ಯುವಜನತೆ ಇಂಥ ತೇಪೆ ಕಲೆಯನ್ನೇ ಬಳಸಿದ್ದದ್ದು. ಹಿಪ್ಪಿಗಳು ಅದನ್ನು ಇನ್ನೂ ಮುಂದಿನ ಘಟ್ಟಕ್ಕೆ ಕೊಂಡೊಯ್ದರು. ಪ್ರತಿಸಂಸ್ಕೃತಿಯ ಸಂಕೇತವಾದ ಈ ತೇಪೆ ಬಟ್ಟೆಗಳೇ ಜಾಗತಿಕ ಮಟ್ಟದಲ್ಲಿ ಫ್ಯಾಷನ್ ನ ಭಾಗವೂ ಆದವು. ಯುವಜನತೆಯನ್ನು ಥಟ್ಟನೆ ಸೆಳೆಯುವ ಬಹುಬಣ್ಣಗಳು, ಅಸಾಂಪ್ರದಾಯಿಕ ವಿನ್ಯಾಸ ಯಾವತ್ತೂ ಫ್ಯಾಷನ್ ಪರಿಣತರ ಪಾಲಿಗೆ ಹುಲ್ಲುಗಾವಲು. ಯಾವುದೇ ಹೊಸ ವಿನ್ಯಾಸದ ವಸ್ತ್ರಗಳನ್ನು ಮಾರುಕಟ್ಟೆ ಮಾಡಲು ಅವರ ಗುರಿಗ್ರಾಹಕರೇ ಯುವಕರು. ಯುವಕರ ಶೈಲಿ ಮಕ್ಕಳಿಗೂ ತಲುಪುತ್ತದೆ. ಹಿರಿಯರು ಕೂಡ ಮಾನಸಿಕ ಯೌವನ ಉಳಿಸಿಕೊಳ್ಳಲು ಅಂಥ ವಿನ್ಯಾಸವನ್ನು ಒಪ್ಪಿಕೊಳ್ಳುವುದಿದೆ.

ತೇಪೆ ವಸ್ತ್ರಗಳು ಪ್ರತಿಸಂಸ್ಕೃತಿಯ ಬಿಂಬವಾಗಿ ಅಷ್ಟೆ ಉಳಿಯಲಿಲ್ಲ. ಹಸಿರು ಬಣ್ಣದ ಜೀನ್ಸ್ ಮೇಲೆ ಮಿಲಿಟರಿ ತೇಪೆಗಳನ್ನು ಹಾಕಿ ಶಾಂತಿಮಂತ್ರ ಪಠಿಸಿದ ಅಮೆರಿಕನ್ ಯುವಕರಿಗೆ ತಮ್ಮ ಈ ಪ್ರಯೋಗ ಫ್ಯಾಷನ್ ಜಗತ್ತಿಗೆ ವಸ್ತುವಾಗಬಹುದು ಎಂಬ ಅಂದಾಜೂ ಇದ್ದಿರಲಿಕ್ಕಿಲ್ಲ.

1970 ಹಾಗೂ 1980ರ ದಶಕದಲ್ಲಿ ಅಮೆರಿಕದ ಯುವಕರು ಇನ್ನೂ ಒಂದು ಹೆಜ್ಜೆ ಮುಂದೆಹೋದರು. ಪ್ರತಿಸಂಸ್ಕೃತಿಯನ್ನು ಅವರು ಸಾಂಪ್ರದಾಯಿಕ ಫ್ಯಾಷನ್ ಧಿಕ್ಕರಿಸಲು ಬಳಸಿಕೊಂಡರು. ಜೀನ್ಸ್ ಮೇಲೆ ಮೊದಲು ಇದ್ದ ಶಾಂತಿ ಸಂಕೇತಗಳು ಅವರಿಗೆ ಎಷ್ಟರ ಮಟ್ಟಿಗೆ ಅರ್ಥವಾಯಿತೋ ಏನೋ, ಆ ಜಾಗದಲ್ಲಿ ತಮ್ಮ ಇಷ್ಟದ ಬ್ಯಾಂಡ್ ಗಳ ಹೆಸರನ್ನು ಬರೆಸಿದರು. ನಟನಟಿಯರ ಚಿತ್ರಗಳನ್ನು ಹಾಕಿಸಿದರು. ಪ್ರೇಮ ನಿವೇದನೆಗೂ ಪ್ಯಾಂಟಿನ ತೇಪೆಯೇ ಒದಗಿಬಂದದ್ದನ್ನ ಕಂಡು ಕೆಲವರು ನಕ್ಕರು. ಹೀಗೆ ತೇಪೆಗಳ ಮೂಲಕ ರೂಢಿಗತ ಫ್ಯಾಷನ್ ವಿರೋಧಿಸಿದ್ದೇ 'ಪಂಕ್ ಚಳವಳಿ' ಎಂಬ ಹೆಸರು ಪಡೆಯಿತು. ಸಾಂಪ್ರದಾಯಿಕ ಮನಸ್ಸಿನ ಕೆಲವರು ಇದನ್ನು 'ತೇಪೆ ಚಳವಳಿ' ಎಂದು ಹೀಗಳೆದರು.

ಮಾರ್ಕ್ ಜಾಕಬ್ಸ್, ಗುಸ್ಸಿ ತರಹದ ಅಂತರರಾಷ್ಟ್ರೀಯ ಜನಪ್ರಿಯ ಬ್ರಾಂಡ್ ಗಳು ಎರಡು ವರ್ಷಗಳಿಂದ ತೇಪೆ ಸರಣಿಯ ಬಟ್ಟೆಗಳು, ಬ್ಯಾಗ್ ಗಳು, ಕೈಗೆ ಕಟ್ಟಿಕೊಳ್ಳುವ ಬ್ಯಾಂಡ್ ಗಳನ್ನು ಮಾರುಕಟ್ಟೆಗೆ ತರುತ್ತಿವೆ. ಅದೇ ಕಲಾಸಿಪಾಳ್ಯದ ಅಂಗಡಿಯಲ್ಲಿ ನೇತುಬಿಟ್ಟ ಪ್ಯಾಂಟನ್ನೂ ತಲುಪಿರುವುದು.

ಗುಸ್ಸಿ ವಸ್ತ್ರ ಕಂಪನಿಯ ಸೃಜನಶೀಲ ನಿರ್ದೇಶಕ ಅಲೆಸ್ಸಾಂಡ್ರೊ ಮೈಕಲ್ ಮೊದಲು ಈ ಸರಣಿಯ ಉತ್ಪನ್ನಗಳನ್ನು ಮಾರುಕಟ್ಟೆಗೆ ತಂದಾಗ ಹೇಳಿದ್ದೇನು ಗೊತ್ತೆ? 'ಹಳತು ಹೊನ್ನು ಎನ್ನುತ್ತಾರೆ. ತೇಪೆ ಬಟ್ಟೆಗಳ ವಿಷಯದಲ್ಲೂ ಅದೇ ಸತ್ಯ. ಹಿಂದೆಲ್ಲ ಯುದ್ಧಕಾಲದಲ್ಲಿ, ಸಂಪ್ರದಾಯ ವಿರೋಧಿಸಿದ ಚಳವಳಿಗಳಲ್ಲಿ ತೇಪೆ ಬಟ್ಟೆಗಳು ಪ್ರಮುಖ ಪಾತ್ರ ವಹಿಸಿವೆ. ಯುವಕಯುವತಿಯರಿಗೆ ಅದು ತಮ್ಮತನ ರುಜುವಾತು ಮಾಡುವ ಮಾಧ್ಯಮವಾಗಿ ಒದಗಿಬಂದಿದೆ. ಈಗಲೂ ತಾತ್ವಿಕ ಭಿನ್ನಾಭಿಪ್ರಾಯಗಳು ಇದ್ದೇ ಇವೆ. ಜೊತೆಗೆ ಹೊಸ ಫ್ಯಾಷನ್ ನ ಹುಡುಕಾಟ. ಇವೆರಡಕ್ಕೂ ಉತ್ತರರೂಪದಲ್ಲಿ ತೇಪೆ ಜೀನ್ಸ್, ತೇಪೆ ಬ್ಯಾಗ್ ಗಳನ್ನು ಹೊರ ತರುತ್ತಿದ್ದೇವೆ' ಎಂದು. ಯುದ್ಧ ವಿರೋಧ, 'ಪಂಕ್ ಚಳವಳಿ' ಎರಡೂ ಅವರ ಅಭಿಪ್ರಾಯದಲ್ಲಿ ಅಡಕವಾಗಿದ್ದವಲ್ಲ.

1870ರಲ್ಲಿ ಜರ್ಮನ್ ವ್ಯಾಪಾರಿ ಲೊಯೆಬ್ ಸ್ಟ್ರಾಸ್ ಮೊದಲಿಗೆ ಜೀನ್ಸ್ ಬಟ್ಟೆಗಳನ್ನು ವಿನ್ಯಾಸ ಮಾಡಿದ ಎಂದು ಫ್ಯಾಷನ್ ಇತಿಹಾಸ ಹೇಳುತ್ತದೆ. ಲೊಯೆಬ್ ತನ್ನ ಹೆಸರನ್ನು ಲಿವೈ ಎಂದು ಬದಲಿಸಿಕೊಂಡನಂತೆ. ಅದೇ ಈಗ 'ಲಿವೈಸ್' ಎಂಬ ಬ್ರಾಂಡ್ ಆಗಿ ಡೆನಿಮ್ ಗಳನ್ನು ಮಾರುತ್ತಿದೆ. ಈ ಕಂಪನಿ ಕೂಡ ತೇಪೆ ಜೀನ್ಸ್ ಗಳ ವಿಸ್ತೃತ ಮಾರುಕಟ್ಟೆಯ ಬೇಡಿಕೆಗೆ ಸ್ಪಂದಿಸುತ್ತಿದೆ.

ಎರಡು ದಶಕಗಳ ಹಿಂದೆ ರಾಜ್ ಕುಮಾರ್ ಸಿನಿಮಾದ ಯಾವುದೋ ಸ್ಟಿಲ್ ಅನ್ನು ಅಂಗಿಯ ಮೇಲೆ ದೊಡ್ಡದಾಗಿ ತೇಪೆ ಹಾಕಿಸಿಕೊಂಡು ಓಡಾಡಿದ ಅಭಿಮಾನಿಗಳನ್ನು ಕಂಡಿದ್ದೆವು. 'ಸಾಹಸ ಸಿಂಹ' ಎಂಬ ನಟ ವಿಷ್ಣುವರ್ಧನ್ ಗುಣ ವಿಶೇಷಣ ತಮ್ಮದೇ ಏನೋ ಎಂಬಂತೆ ತೇಪೆ ಹಾಕಿಸಿಕೊಂಡು ಬೀಗಿದ ಪಡ್ಡೆಗಳನ್ನೂ ಕಂಡಿದ್ದೇವೆ. 'ಜೋಗಿ' ಸಿನಿಮಾದಲ್ಲಿ ಶಿವರಾಜ್ ಕುಮಾರ್ ಹಾಕಿದ್ದ ಅಂಗಿಯ ಮೇಲಿದ್ದ ಅಂಗೈನ ಗುರುತಿನ ತೇಪೆ ಆ ಕಾಲಘಟ್ಟದಲ್ಲಿ 'ಜೋಗಿ ಶರ್ಟ್' ಎನಿಸಿಕೊಂಡೇ ಮಾರುಕಟ್ಟೆಗೆ ಲಗ್ಗೆಇಟ್ಟಿದ್ದು ನೆನಪಿದೆಯಲ್ಲ. ಉಪೇಂದ್ರ ತಮ್ಮದೇ ಚಹರೆಯ ಚಿತ್ರವಿರುವ ಟಿಶರ್ಟ್ ಇಳಿಬಿಟ್ಟುಕೊಂಡು ಓಡಾಡಿದರಲ್ಲ. ಇವೂ ಪ್ರತಿಸಂಸ್ಕೃತಿಯ ದೇಸಿ ಕುರುಹುಗಳೇ.

ಈಗಲೂ ತೇಪೆ ಜೀನ್ಸ್ ತೊಟ್ಟ ತರುಣತರುಣಿಯರು ಕಾಣುತ್ತಾರೆ. ಆ ತೇಪೆಗಳಲ್ಲಿ ಗುಲಾಬಿ ಹೂಗಳಿವೆ. ಇಷ್ಟವಾದವರ ಹೆಸರುಗಳಿವೆ, ಭಾವಚಿತ್ರಗಳಿವೆ. ರಂಗೋಲಿಗಳಿವೆ. ಯಾವುದೋ ಅರ್ಥವಾಗದ ಭಾಷೆಯ ಸಾಲುಗಳೂ ಇವೆ. ಅದು ಯಾರಿಗೆ ಅರ್ಥವಾಗಬೇಕೋ ಅವರಿಗೆ ಅರ್ಥವಾದರೆ ಸಾಕು ಎಂಬ ನಿರೀಕ್ಷೆಯೂ ಇದೆ. ಜನ್ಮದಿನಕ್ಕೆ ತೇಪೆಯ ಮೇಲೆ ಸಾಹಿತ್ಯದ ಚಿತ್ತಾರ ಹಾಕಿ ಉಡುಗೊರೆ ಕೊಡುವ ನವಕಾಲದ ಹುಡುಗ ಹುಡುಗಿಯರಿಗೆ ಪ್ರತಿಸಂಸ್ಕೃತಿಯ ಬೇರುಗಳ ಅರಿವಿದೆಯೋ ಇಲ್ಲವೋ ಗೊತ್ತಿಲ್ಲ. ತೇಪೆಗಳಂತೂ ನಗುತ್ತಿವೆ. ■